ನೀರೆತ್ತುವ ಮೆಷಿನಿನ ಮನೆಯಲ್ಲಿ ಕೂತು ಅನ್ನ ಬೇಯಿಸಿಕೊಳ್ಳುತ್ತಿದ್ದ. ಬಾವಿಯಿಂದ ಹೊಗೆ ಏಳುತ್ತಿದೆ, ಅಲ್ಲಿ ಯಾರಾದರೂ ಇದ್ದು ವಿಚಾರಿಸಿದರೆ ಗೊತ್ತಾಗಬಹುದು ಎಂದು ಬಾವಿ ಮನೆಗೆ ಇಳಿದರೆ ನರಸಜ್ಜ ಅಲ್ಲೇ ಕೂತಿದ್ದ. ಈ ಅನುಭವವನ್ನು ಅವನ ಕಥನ ಶಕ್ತಿಯನ್ನೂ ಕುರಿತು ಬರೆದ ಲೇಖನವನ್ನು ಲಂಕೇಶರಿಗೆ ಕಳಿಸಿದೆ. ಒಂದೆರಡು ದಿನಗಳಲ್ಲಿಯೇ ಆ ಲೇಖನ ಪ್ರಕಟವಾಯಿತು. ಲೇಖನ ಕಳಿಸಿದ್ದೆನಾದರೂ ಅದರಲ್ಲಿ ನನ್ನ ನಾಮಧೇಯ ಮಾತ್ರವಿದ್ದು, ವಿಳಾಸವನ್ನೇ ಕಾಣಿಸಿರಲಿಲ್ಲ. ಲಂಕೇಶರು ನಾನು ಎಲ್ಲಿಯವನೆಂದು ವಿಳಾಸ ಪತ್ತೆ ಹಚ್ಚಿ, ಒಂದು ಕಾರ್ಡು ಬರೆದು ಅಂಥ ಲೇಖನ ಎಷ್ಟಿದ್ದರೂ ಕಳಿಸಬೇಕೆಂದು ತಿಳಿಸಿ, ಅರುವತ್ತು ರೂ. ಸಂಭಾವನೆ ಕಳಿಸಿದ್ದರು. ಆಮೇಲೆ ನಾನು ಲಂಕೇಶ್ ಪತ್ರಿಕೆಗೆ ಅಂಥದ್ದೇ ಜನಪದ ಜಗತ್ತಿನ ಒಂದಷ್ಟು ಲೇಖನಗಳನ್ನು ಬರೆದು ಕಳಿಸಿದೆ. ಈ ಜನಪದ ಸಂಗತಿಗಳನ್ನು ಓದಿದ ಪೂರ್ಣಚಂದ್ರ ತೇಜಸ್ವಿಯವರೂ ಒಮ್ಮೆ ನನ್ನ ಅನುಭವಸಹಜ ಬರವಣಿಗೆಯನ್ನು ಮೆಚ್ಚಿಕೊಂಡು ಅದೇ ಲಂಕೇಶ್ ಪತ್ರಿಕೆ ಸಂದರ್ಶನದಲ್ಲಿ ಮಾತಾಡಿದ್ದರು. ನನ್ನ ಬಾಲ್ಯ ಮತ್ತು ಜಾನಪದ ಜಗತ್ತಿನ ಓಡಾಟದ ಅನುಭವಗಳು ಅಪಾರವಾದುದರಿಂದ ಏನಾದರೂ ಬರೆಯಲು ಕೂತರೆ ಅದು ಕಥೆಯೋ, ಅನುಭವಕಥನವೋ, ಪ್ರವಾಸಕಥನವೋ, ಕಾದಂಬರಿಯೋ ಏನೋ ಒಂದು ಆಗಿಬಿಡುತ್ತದೆ.

★★★

ನನ್ನ ನಲವತ್ತು ವರ್ಷಗಳ ಸುತ್ತಾಟದ ಅನುಭವವನ್ನೆಲ್ಲ ಸೇರಿಸಿ ಒಂದು ಕಾದಂಬರಿ ಬರೆಯ ಬಾರದೇಕೆ ಎಂಬ ಮೋಹ ಅಂತರಂಗದಲ್ಲಿದ್ದಿತು. ಚಿತ್ರದುರ್ಗ ಪಟ್ಟಣದಲ್ಲಿ ಅಕ್ಷರಬಲ್ಲವರು ಅಲ್ಲಿಯ ಇತಿಹಾಸ ಕುರಿತು ಆಡುವ ಭಾವುಕತೆಯ ಮಾತುಗಳನ್ನು ಮೇಲಿಂದ ಮೇಲೆ ಕೇಳುತ್ತಿದ್ದೆ. ಆದರೆ ಗ್ರಾಮೀಣರು ಮತ್ತು ಜನಪದ ವಕ್ತೃಗಳು ಅಲ್ಲಿಯ ಗತಕಾಲದ ಸಂಗತಿಗಳನ್ನು ಕುರಿತು ಆಡುತ್ತಿದ್ದ ಮಾತುಗಳೇ ಬೇರೆ ಇದ್ದವು. ಇದು ಮತ್ತು ನನ್ನ ಓಡಾಟದ ಅನುಭವಗಳಿಗೆ ಹೊಂದಿಕೊಳ್ಳುವ ಒಂದು ಐತಿಹಾಸಿಕ ಕಥನಬೀಜ ಯಾವುದಾಗಬಹುದು ಎಂದು ಯೋಚಿಸಿದೆ. ಹೇಗೂ ಶ್ರೀರಂಗಪಟ್ಟಣ, ಮೈಸೂರು ಕಡೆಯ ಹೈದರ್, ಟಿಪ್ಪೂ ಈ ಚಿತ್ರದುರ್ಗದ ಕಡೆಯೂ ದಾಳಿ ನಡೆಸಿದ್ದರಲ್ಲ ಅವರನ್ನೇ ಕೇಂದ್ರೀಕರಿಸಿ, ಪರ, ವಿರೋಧವಲ್ಲದ ನನ್ನ ಇತಿಹಾಸಸಂಬಂಧಿ ಅನುಭವಗಳನ್ನು ಹೇಳಬಹುದೇ ಎಂದು ಎಷ್ಟೋ ವರ್ಷಗಳ ನಂತರ ಅನಿಸಿತು. ಆದರೆ ಟಿಪ್ಪುವಿನ ಕಥನವನ್ನೂ, ಇತಿಹಾಸವನ್ನೂ, ನನ್ನ ಅನುಭವಗಳನ್ನೂ ಹೊಂದಿಸಿ ಬರೆಯುವುದೇ ಅಸಾಧ್ಯವೆನಿಸಿಬಿಟ್ಟಿತು. ಒಂದಕ್ಕೊಂದನ್ನು ಲಗತ್ತಿಸುವುದೇ ದುಸ್ತರವಾಯಿತು. ಐದಾರು ವರ್ಷ, ಏಳೆಂಟು ಬಾರಿ ಬರೆದ ಮೇಲೆ ಆ ಐತಿಹಾಸಿಕ ಕಥನಕ್ಕೆ ಒಂದು ರೂಪ ಬಂದಿತು. 2012ರಲ್ಲಿ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಪ್ರಕಟವಾದ ಮೇಲೆ ಅದನ್ನು ಓದುಗರು, ವಿಮರ್ಶಕರು ಮೆಚ್ಚಿದ ರೀತಿಯೇ ಆಶ್ಚರ್ಯ. ಕನ್ನಡದಲ್ಲಿ ಓದುಗರ ಸಂಖ್ಯೆ ಅಪಾರವಾಗಿಯೇ ಇದೆ ಎನ್ನಿಸಿತು. ಇನ್ನೂರು ಪುಟದ ಆ ಕಾದಂಬರಿಯ ಮೇಲೆ ಬಂದ ವಿಮರ್ಶಾ ಲೇಖನ ಮತ್ತು ಅಭಿಪ್ರಾಯಗಳನ್ನು ಪ್ರಕಟಿಸಿದರೆ ಮುನ್ನೂರು ಪುಟಗಳಷ್ಟಾಗುತ್ತದೆ. ಅನಂತಮೂರ್ತಿಯವರು ಮೊದಲ ಬಾರಿಗೆ ನನಗೆ ದೂರವಾಣಿ ಮಾಡಿ ಮಾತನಾಡಿದ್ದು ಈ ಕಾದಂಬರಿ ಪ್ರಕಟವಾದಗಲೇ. ಅವರು ಬರೆದುಕೊಟ್ಟ ಅಭಿಪ್ರಾಯವನ್ನು ಕಾದಂಬರಿಯ ಮೂರು, ನಾಲ್ಕನೆಯ ಮುದ್ರಣಕ್ಕೆ ಗಿರೀಶ ಕಾರ್ನಾಡರ ಬೆನ್ನುಡಿಯೊಡನೆ ಬಳಸಿಕೊಳ್ಳಲಾಗಿದೆ.

ಲೇಖನದ ಆರಂಭಕ್ಕೆ ನಾನು ಗೊತ್ತಿದ್ದಷ್ಟನ್ನೇ ಬರೆಯುವವನು ಎಂದಿದ್ದೇನೆ. ಇಷ್ಟಾಗಿಯೂ